# ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ

   

## ಸ್ವಯಂ ಉದ್ಯೋಗ ಯೋಜನೆ

- ಈ ಯೋಜನೆಯನ್ನು ರಾಷ್ಟ್ರೀಕೃತ / ಗ್ರಾಮೀಣ / ಶೆಡ್ಯೂಲ್ಡ್ ಬ್ಯಾಂಕುಗಳ ಸಹಯೋಗದೊಡನೆ ಅನುಷ್ಠಾನಗೊಳಿಸಲಾಗುತ್ತಿದೆ.

| | |
|---|---|
| ಘಟಕ ವೆಚ್ಚ | ರೂ. 1.00 ಲಕ್ಷದ ವರೆಗೆ. |
| ಸಹಾಯಧನ | ಘಟಕ ವೆಚ್ಚದ ಶೇ. 50 ರಷ್ಟು ಅಥವಾ ಗರಿಷ್ಟ ಮಿತಿ ರೂ. 35,000/- |
| ಬ್ಯಾಂಕ್ ಸಾಲ | ಘಟಕ ವೆಚ್ಚದ ಶೇ. 50 ರಷ್ಟು ಅಥವಾ ಗರಿಷ್ಟ ಮಿತಿ ರೂ. 65000/- |

**ಕೈಗೆತ್ತಿಕೊಳ್ಳಬಹುದಾದ ಕೆಲವು ಆರ್ಥಿಕ ಚಟುವಟಿಕೆಗಳು;- (ಉದ್ದೇಶಗಳು)**

- ಕೃಷಿಯಾಧಾರಿತ ಚಟುವಟಿಕೆಗಳು, ಮೀನುಗಾರಿಕೆ, ಪಾನ್ ಅಂಗಡಿ, ಚಪ್ಪಲಿ ಅಂಗಡಿ, ಬ್ಯೂಟಿ ಪಾರ್ಲರ್, ಗೂಡಂಗಡಿ, ಪ್ಯಾನ್ಸಿ ಸ್ಟೋರ್, ಚಾಪೆ ತಯಾರಿಕೆ, ದಿನಸಿ ಅಂಗಡಿ, ಟೈಲರಿಂಗ್ ಶಾಪ್, ಹೈನುಗಾರಿಕೆ, ಬುಟ್ಟಿ ಹೆಣೆಯುವುದು, ರೆಡಿಮೇಡ್ ಗಾರ್ಮೆಂಟ್ಸ್, ಗುಡಿ ಕೈಗಾರಿಕೆ, ಬಡಗಿತನ, ದಿನಸಿ ಅಂಗಡಿ, ಮೊಬೈಲ್ ದುರಸ್ತಿ ಇತರೆ ಯಾವುದೇ ಸಣ್ಣ ವ್ಯಾಪಾರ ಮತ್ತು ಇತ್ಯಾದಿ

**ಸೌಲಭ್ಯ ಪಡೆಯಲು ಅರ್ಜಿದಾರರಿಗೆ ಇರಬೇಕಾದ ಅರ್ಹತೆಗಳು:-**

- ಅರ್ಜಿದಾರರು ಪರಿಶಿಷ್ಠ ಜಾತಿಗೆ ಸೇರಿದವರಾಗಿರಬೇಕು.
- ಅರ್ಜಿದಾರರು ಕನಿಷ್ಠ ಕಳೆದ 15 ವರ್ಷಗಳಿಂದ ಕರ್ನಾಟಕದಲ್ಲಿ ವಾಸಿಸುತ್ತಿರಬೇಕು.
- ಅರ್ಜಿದಾರರ ವಯಸ್ಸು 18 ರಿಂದ 60 ವರ್ಷಗಳ ಒಳಗಿರಬೇಕು.
- ಅರ್ಜಿದಾರರ ಕುಟುಂಬದ ಸದಸ್ಯರಲ್ಲಿ ಯಾರೊಬ್ಬರೂ ಸರ್ಕಾರಿ ನೌಕರಿಯಲ್ಲಿರಬಾರದು.

- ಅರ್ಜಿದಾರರು ಅಥವಾ ಅವರ ಕುಟುಂಬದವರು ಈ ಹಿಂದೆ ನಿಗಮದಿಂದ ಯಾವುದೇ ಸೌಲಭ್ಯ ಪಡೆದಿರಬಾರದು.
- ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ರೂ. 22,000/- ಮೀರಿರಬಾರದು.
- ಅರ್ಜಿದಾರರು ಬಿಪಿಎಲ್ ಪಟ್ಟಿಯಲ್ಲಿ ಇರಬೇಕು.

**<u>ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು :-</u>**

- ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ ಭಾವಚಿತ್ರ-2
- ಜಾತಿ ಪ್ರಮಾಣ ಪತ್ರ
- ಆದಾಯ ಪ್ರಮಾಣ ಪತ್ರ
- ಪಡಿತರ ಚೀಟಿ
- ಗುರುತಿನ ಚೀಟಿ (ಆಧಾರ್ ಕಾರ್ಡ್/ಚುನಾವಣಾ ಗುರುತಿನ ಚೀಟಿ/ಡ್ರೈವಿಂಗ್‌ಲೈಸನ್ಸ್/ ಪಾನ್‌ಕಾರ್ಡ್/ಭಾವಚಿತ್ರವಿರುವ ಬ್ಯಾಂಕ್ ಪಾಸ್‌ಪುಸ್ತಕ/ಪಾಸ್‌ಪೋರ್ಟ್)
- ಆಗತ್ಯವಿರುವ ಲೈಸನ್ಸ್/ಪರವಾನಗಿ
- ದರಪಟ್ಟಿ ಮತ್ತು ಯೋಜನಾ ವರದಿ

**<u>ಫಲಾನುಭವಿಗಳ ಆಯ್ಕೆ ವಿಧಾನ ಹಾಗೂ ಯೋಜನೆ ಅನುಷ್ಠಾನದ ವಿವಿಧ ಹಂತಗಳು:-</u>**

- ಅರ್ಜಿದಾರರು ಈ ಯೋಜನೆಯಡಿ ಸೌಲಭ್ಯ ಪಡೆಯಲು ನಿಗದಿಪಡಿಸಿದÀ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಇಲ್ಲವಾದಲ್ಲಿ ಆಯ್ಕೆ ಸಮಿತಿಗೆ ಅರ್ಜಿಯನ್ನು ಮಂಡಿಸಲಾಗುವುದಿಲ್ಲ.
- ಸ್ವೀಕರಿಸಿದ ಅರ್ಜಿಗಳನ್ನು ವಿಧಾನಸಭಾ ಕ್ಷೇತ್ರವಾರು ಪಟ್ಟಿ ಮಾಡಿ, ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿನ ಆಯ್ಕೆ ಸಮಿತಿ ಸಭೆಗೆ ಮಂಡಿಸಲಾಗುವುದು.
- ಮಹಿಳೆಯರಿಗೆ ಶೇ. 33.33 ಹಾಗೂ ಅಂಗವಿಕಲರಿಗೆ ಶೇ.3ರಷ್ಟು ಮೀಸಲಾತಿ ಅನ್ವಯ ಆಯ್ಕೆ ಮಾಡಲಾಗುವುದು.
- ಆಯ್ಕೆ ಸಮಿತಿಯಿಂದ ಆಯ್ಕೆಯಾದ ಬಗ್ಗೆ ಅರ್ಜಿದಾರರಿಗೆ ಅಂಚೆ/ಎಸ್.ಎಮ್.ಎಸ್ ಮೂಲಕ ತಿಳಿಸಿಲಾಗುವುದು ಅಥವಾ ಅರ್ಜಿದಾರರೇ ನೇರವಾಗಿ ನಿಗಮದ ಅಂತರ್ಜಾಲ ತಾಣದಲ್ಲಿ ಅರ್ಜಿ ಸಂಖ್ಯೆ ದಾಖಲಿಸಿ ತಿಳಿದುಕೊಳ್ಳಬಹುದು.
- ನಿಗಮದ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ಆಯ್ಕೆ ಸಮಿತಿ ಮೂಲಕ ಆಯ್ಕೆ ಮಾಡಲ್ಪಟ್ಟ ಅರ್ಜಿದಾರರ ಸ್ಥಳ ಪರಿಶೀಲನೆ ಮಾಡಿ ಅರ್ಹರಿರುವ ಕುರಿತು ವರದಿ ಸಲ್ಲಿಸುವರು.
- ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಅರ್ಹರೆಂದು ವರದಿ ಸಲ್ಲಿಸಿದ ಅರ್ಜಿದಾರರು ಮೂಲ ದಾಖಲೆಗಳನ್ನು ಜಿಲ್ಲಾ ಕಛೇರಿಗೆ ಹಾಜರುಪಡಿಸಿ ಜಿಲ್ಲಾ ವ್ಯವಸ್ಥಾಪಕರಿಂದ ಧೃಢೀಕರಿಸಿದ ನಂತರ ಅರ್ಜಿಗಳನ್ನು ಫಲಾನುಭವಿಗಳು ಸೂಚಿಸಿದ ಬ್ಯಾಂಕ್ ಶಾಖೆಗಳಿಗೆ ಸಾಲ ಮಂಜೂರಾತಿಗೆ ಕಳುಹಿಸಿ

ಫಲಾನುಭವಿಗಳಿಗೆ ಅಂಚೆ/ಎಸ್.ಎಮ್.ಎಸ್ ಮೂಲಕ ಮಾಹಿತಿ ಕೊಡಲಾಗುವುದು. ಅಥವಾ ಅರ್ಜಿದಾರರೇ ನೇರವಾಗಿ ನಿಗಮದ ಅಂತರ್ಜಾಲ ತಾಣದಲ್ಲಿ ಅರ್ಜಿ ಸಂಖ್ಯೆ ದಾಖಲಿಸಿ ತಿಳಿದುಕೊಳ್ಳಬಹುದು.

- ಅರ್ಜಿದಾರರು ಪ್ರಾರಂಭಿಸಲು ಉದ್ದೇಶಿಸಿರುವ ಘಟಕದ ಸ್ಥಾಪನೆಯೆ ಸಾಧ್ಯತೆ ಮತ್ತು ಆರ್ಥಿಕ ಸಿಂಧುತ್ವ ಆಧಾರಿಸಿ ಸಾಲ ಮಂಜೂರಾತಿ ನೀಡುವುದು ಆಯಾ ಬ್ಯಾಂಕಿನ ವ್ಯವಸ್ಥಾಪಕರ ವೈಯಕ್ತಿಕ ಜವಾಬ್ದಾರಿಯಾಗಿರುತ್ತದೆ. ಒಂದು ವೇಳೆ ಬ್ಯಾಂಕ್ ವ್ಯವಸ್ಥಾಪಕರು ವಿನಾ ಕಾರಣ ಅರ್ಜಿ ತಿರಸ್ಕರಿಸಿದಲ್ಲಿ, ನಿಗಮವು ಸೂಕ್ತ ಮಟ್ಟದಲ್ಲಿ ವ್ಯವಹರಿಸಿ ಫಲಾನುಭವಿಗೆ ನ್ಯಾಯ ಒದಗಿಸಲು ಸಹಕರಿಸುವುದು.
- ಬ್ಯಾಂಕ್‌ಗಳಿಂದ ಸಾಲ ಮಂಜೂರಾತಿ.
- ಸಹಾಯಧನ ಬಿಡುಗಡೆ ಕೋರಿ ನಿಗದಿತ ನಮೂನೆಯಲ್ಲಿ ಬ್ಯಾಂಕ್ ಶಾಖೆಗಳ ವ್ಯವಸ್ಥಾಪಕರು ನಿಗಮಕ್ಕೆ ಪ್ರಸ್ತಾವನೆ ಸಲ್ಲಿಸುವರು.
- ನಿಗಮದಿಂದ ಸಂಬಂಧಿಸಿದ ಬ್ಯಾಂಕ್ ಶಾಖೆಗಳಿಗೆ ನಿಯಮಾನುಸಾರ ಸಹಾಯಧನ ಬಿಡುಗಡೆ ಮಾಡಲಾಗುವುದು.
- ಬ್ಯಾಂಕ್ ವತಿಯಿಂದ ಮಂಜೂರು ಮಾಡಿದ ಸಾಲದ ಮೊತ್ತದೊಂದಿಗೆ ನಿಗಮದಿಂದ ಬಿಡುಗಡೆ ಮಾಡಿದ ಸಹಾಯಧನದ ಮೊಬಲಗನ್ನು ಒಟ್ಟಿಗೆ ಸೇರಿಸಿ ಉತ್ಪಾದಕ ಘಟಕವನ್ನು ಸ್ಥಾಪಿಸಲು ಫಲಾನುಭವಿಗೆ/ಸರಬರಾಜುದಾರರಿಗೆ ಸಂಬಂಧಿಸಿದ ಬ್ಯಾಂಕ್ ಶಾಖೆಯು ಬಿಡುಗಡೆ ಮಾಡುತ್ತದೆ.
- ಫಲಾನುಭವಿಯು ಉತ್ಪಾದಕ ಘಟಕವನ್ನು ಸ್ಥಾಪಿಸಿ ನಿಗಮಕ್ಕೆ ಮಾಹಿತಿ ನೀಡುವುದು.
- ನಿಗಮದ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ನಿಗಮದ ಸಹಾಯಧನ ಹಾಗೂ ಬ್ಯಾಂಕ್ ಸಾಲವನ್ನು ನಿಗದಿತ ಉದ್ದೇಶಕ್ಕೆ ಫಲಾನುಭವಿಯು ಬಳಕೆ ಮಾಡಿ ಉತ್ಪಾದಕ ಘಟಕ ಪ್ರಾರಂಭಿಸಿರುವ ಕುರಿತು ಸ್ಥಳ ಪರಿಶೀಲನಾ ವರದಿಯನ್ನು ಫೋಟೋ ಸಮೇತ ಜಿಲ್ಲಾ ಕಛೇರಿಗೆ ಸಲ್ಲಿಸುವರು.
- ನಿಗಮದಿಂದ ಬಿಡುಗಡೆ ಮಾಡಲಾದ ಸಹಾಯಧನವನ್ನು ನಿಗದಿತ ಉದ್ದೇಶಕ್ಕೆ ವಿನಿಯೋಗಿಸಿರುವ ಕುರಿತು ಬ್ಯಾಂಕ್ ವ್ಯವಸ್ಥಾಪಕರಿಂದ ಸಹಾಯಧನ ವಿನಿಯೋಗ ಪ್ರಮಾಣ ಪತ್ರ ಪಡೆಯುವುದು.







**<u>ಸೂಚನೆ:</u>** ಹೆಚ್ಚಿನ ಮಾಹಿತಿಗಾಗಿ ಆಯಾ ಜಿಲ್ಲಾ ಕಛೇರಿಯನ್ನು ದೂರವಾಣಿ ಮೂಲಕ ಅಥವಾ ಖುದ್ದಾಗಿ ಸಂಪರ್ಕಿಸುವುದು, ಜಿಲ್ಲಾ ಕಛೇರಿಗಳ ವಿಳಾಸ ಮತ್ತು ದೂರವಾಣಿ ಸಂಖ್ಯೆಗಳು ಇದೇ ತಾಣದಲ್ಲಿ ಲಭ್ಯವಿದೆ.